

ಸಸ್ಪೆಂಡರ್‌ಗಳನ್ನು ತೊಟ್ಟಿದ್ದು ಎದ್ದುಕಾಣುತ್ತಿತ್ತು.

ಅಮೆರಿಕದ ಮಾಜಿ ಅಧ್ಯಕ್ಷ ಫ್ರಾಂಕ್ಲಿನ್ ಡೆಲಾನೊ ರೋಸ್‌ವೆಲ್ಟ್, ಜಾಹೀರಾತಿನ ಪಿತಾಮಹ ಎಂದೇ ಹೆಸರಾಗಿರುವ ಡೇವಿಡ್ ಒಗಿಲ್ವಿ, ಬ್ರಿಟಿಷ್ ನಟ ಸರ್ ರಾಲ್ಫ್ ಡೇವಿಡ್ ರಿಚರ್ಡ್‌ಸನ್, ಫ್ರಾನ್ಸ್‌ನ ಮಿಲಿಟರಿ ಕಮಾಂಡರ್ ಆಗಿದ್ದ ನೆಪೋಲಿಯನ್ ಬೊನಾಪಾರ್ಟೆ ಸಸ್ಪೆಂಡರ್ ಬಳಸುತ್ತಿದ್ದರು.

ಕಳೆದ 300 ವರ್ಷಗಳಿಂದ ಸಸ್ಪೆಂಡರ್‌ಗಳು ಬಳಕೆಯಲ್ಲಿವೆ. ಆದರೆ, ಅವನ್ನು ಜನಪ್ರಿಯಗೊಳಿಸಿದ್ದು ಇಂಗ್ಲೆಂಡ್‌ನ ಆಲ್ಬರ್ಟ್ ಥರ್ಸ್‌ಟನ್ ಎಂಬಾತ ಹೊಲಿಗೆಗೆ ಬೇಕಾದ ಸೂಜಿ, ದಾರ, ಗುಂಡಿ, ಲೈನಿಂಗ್ ಬಟ್ಟೆಗಳು



ಮೊದಲಾದವನ್ನು ಮಾರಾಟ ಮಾಡುವ ಮಳಿಗೆಯೊಂದನ್ನು ತೆರೆದಿದ್ದರು. 1822ರಲ್ಲಿ ಆ ಮಳಿಗೆಯಲ್ಲಿ ಅವರು ವ್ಯಾಪಾರ ಮಾಡುವಾಗ ಸಸ್ಪೆಂಡರ್‌ಗಳನ್ನು ತೊಟ್ಟಿದ್ದರು. ಎಷ್ಟೋ ಗ್ರಾಹಕರು ಅದನ್ನು ಹಾಕಿಕೊಂಡಿದ್ದು ಯಾಕೆ ಎಂದು ಕೇಳಿಕೊಂಡು, ಅವರೂ ಅದನ್ನು ತಮ್ಮ ಫ್ಯಾಷನ್ ಸಂಕೇತವಾಗಿಸಿಕೊಂಡರು. ಅದು ಫ್ಯಾಷನ್ ದೃಷ್ಟಿಯಲ್ಲಿ ನಾಜೂಕಾದ ಪರಿಕರ ಎಂದೆನಿಸಿಕೊಂಡಿದ್ದ ಕಾಲ. ಬೆಲ್ಟ್‌ಗಳು ಆಗ ಅಪ್ರಾಯೋಗಿಕ ಎನಿಸಿಕೊಂಡಿದ್ದವು. ಹೀಗಾಗಿ ಪ್ಯಾಂಟ್‌ಗಳು ಹಾಗೂ ಸ್ಕರ್ಟ್‌ಗಳು ಭದ್ರವಾಗಿ ನಿಲ್ಲಲಿ ಎಂದು ಸಸ್ಪೆಂಡರ್‌ಗಳನ್ನು ಹಾಕಿಕೊಳ್ಳುವುದು ಬಹುತೇಕರಲ್ಲಿ ಚಾಲ್ತಿಗೆ ಬಂದಿತು. ಮೊದಲ ವಿಶ್ವಯುದ್ಧದ ನಂತರ ಬೆಲ್ಟ್‌ಗಳನ್ನು ತೊಡುವ ಪುರುಷರ ಸಂಖ್ಯೆ ಏರತೊಡಗಿತು. ಹೀಗಾಗಿ ಸಸ್ಪೆಂಡರ್‌ಗಳು ಸ್ವಲ್ಪ ಹಿನ್ನೆಲೆಗೆ ಸರಿದವು.

1938ರಲ್ಲಿ ಅಮೆರಿಕದ 'ಲೈಫ್' ನಿಯತಕಾಲಿಕವು ಒಂದು ಸಮೀಕ್ಷೆ ನಡೆಸಿತು. ಆ ದೇಶದ ಶೇ 60ರಷ್ಟು ಪುರುಷರು ಸಸ್ಪೆಂಡರ್‌ಗಳಿಗಿಂತ ಬೆಲ್ಟ್‌ಗಳನ್ನು ತೊಡಲು ಇಷ್ಟಪಡುವುದಾಗಿ ಅಭಿಪ್ರಾಯಪಟ್ಟಿದ್ದರು. ಫುಲ್ಲರ್ ಕಟ್ ಪ್ಯಾಂಟ್‌ಗಳನ್ನು ತೊಡುವ ಪುರುಷರು ಅವಕ್ಕೆ ಸಸ್ಪೆಂಡರ್‌ಗಳು ಹೊಂದುತ್ತವೆ ಎಂದು ಆ ಫ್ಯಾಷನ್ ಮಂತ್ರವನ್ನು ಮುಂದುವರಿಸಿದ್ದರಷ್ಟೆ.

1987ರಲ್ಲಿ ಆಲಿವರ್ ಸ್ಟೋನ್ ಎಂಬ ಅಮೆರಿಕದ ನಿರ್ದೇಶಕ 'ವಾಲ್ ಸ್ಟ್ರೀಟ್' ಎಂಬ ಸಿನಿಮಾ ಮಾಡಿದರು. ಆ ಸಿನಿಮಾದ ಪ್ರಮುಖ ಪಾತ್ರಧಾರಿಗಳು ಸಸ್ಪೆಂಡರ್‌ಗಳನ್ನು ತೊಟ್ಟಿದ್ದರು. ಅದನ್ನು ನೋಡಿದ ಎಷ್ಟೋ ವೃತ್ತಿಪರರು ಅಂತಹ ಉಡುಗೆಯ ಫ್ಯಾಷನ್ ಅನ್ನು ಅನುಕರಿಸಲಾರಂಭಿಸಿದರು. ಅದು ಬೇರೆ ದೇಶಗಳಿಗೂ ವ್ಯಾಪಿಸಿತು. 1994ರಲ್ಲಿ ಹಿಂದಿಯಲ್ಲಿ ತೆರೆಕಂಡ, ಸೂರಜ್ ಬಾರ್ಜಾತ್ಯ ನಿರ್ದೇಶನದ 'ಹಮ್ ಆಪ್ ಕೆ ಹೈ ಕೌನ್' ಸಿನಿಮಾದಲ್ಲಿ



ಸಲ್ಮಾನ್ ಖಾನ್ ಸಸ್ಪೆಂಡರ್‌ಗಳನ್ನು ಹಾಕಿಕೊಂಡ ಹಾಗೂ ಮಾಧುರಿ ದೀಕ್ಷಿತ್ ಸೀರೆ, ಲೆಹೆಂಗಾ ತೊಟ್ಟ ಪೋಸ್ಟರ್‌ಗಳು ಯುವಕ–ಯುವತಿಯರ ಮನಸೂರೆಗೊಂಡಿದ್ದವು.

ಅಲ್ಲಿಂದಾಚೆಗೆ ಆಗೀಗ ಸಿನಿಮಾ ತರಹದ ಮಾಧ್ಯಮ ಫ್ಯಾಷನ್ ಸ್ಟೇಟ್‌ಮೆಂಟ್‌ಗಳನ್ನು ನೀಡುತ್ತಾ, ವಿನ್ಯಾಸದ ವಿಷಯದಲ್ಲಿ ಪ್ರಭಾವಿಸುತ್ತಾ ಬಂದಿರುವುದನ್ನು ನೋಡಿದ್ದೇವೆ. ಇತ್ತೀಚೆಗೆ ತೆರೆಕಂಡ ಶಾರುಖ್ ಖಾನ್ ಅಭಿನಯದ 'ಪಠಾಣ್' ಹಿಂದಿ ಸಿನಿಮಾದಲ್ಲಿ ಅವರೂ ಸಸ್ಪೆಂಡರ್‌ಗಳನ್ನು ತೊಟ್ಟಿದ್ದರು. ದಕ್ಷಿಣ ಭಾರತದ ರಾಮ್ ಪೋತಿನೇನಿ, ರಾಮ್‌ಚರಣ್, ಕನ್ನಡದ ದರ್ಶನ್ ತರಹದ ನಟರೂ ಸಸ್ಪೆಂಡರ್‌ಗಳನ್ನು ತೊಟ್ಟ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದನ್ನು ಅಭಿಮಾನಿಗಳು ಕಣ್ತುಂಬಿಕೊಂಡಿದ್ದಾಗಿದೆ.

ಸಸ್ಪೆಂಡರ್‌ಗಳನ್ನು ಸಾಮಾನ್ಯವಾಗಿ ಬಟ್ಟೆಗಳಿಂದಲೇ ಮಾಡುತ್ತಾರೆ. ಪ್ಯಾಂಟಿನ ಮುಂದಿನ ಭಾಗ ಹಾಗೂ ಹಿಂದಿನ ಭಾಗಕ್ಕೆ ಸಿಲುಕಿಸುವ ಕಡೆ ಎಲಾಸ್ಟಿಕ್‌ಗಳನ್ನು ಹಾಕುವುದರಿಂದ ಅವು ದೇಹದ ಆಕಾರಕ್ಕೆ ತಕ್ಕಂತೆ ಬಿಗಿಯಾಗಿ ನಿಲ್ಲಬಲ್ಲವು. ಕಾಲದಿಂದ ಕಾಲಕ್ಕೆ ಅವುಗಳ ವಿನ್ಯಾಸ, ಬಳಸುವ ಮೆಟೀರಿಯಲ್‌ಗಳಲ್ಲೂ ಬದಲಾವಣೆಗಳಾಗಿವೆ. ಚರ್ಮದ ಸಸ್ಪೆಂಡರ್‌ಗಳನ್ನು ಕೂಡ ಕೆಲವು ವಿನ್ಯಾಸಕರು ರೂಪಿಸಿದರು. ಎಂದೋ ಫ್ಯಾಷನ್ ಸಂಕೇತ ಎಂದೆನಿಸಿದ್ದ ಗೆಲೀಸ್ ಸೂಟ್‌ಗಳು ಈಗೀಗ ಮುಂಚೂಣಿಗೆ ಬಂದದ್ದು 'ಆರ್‌ಆರ್‌ಆರ್' ಸಿನಿಮಾದ 'ನಾಟು ನಾಟು' ಹಾಡಿನ ಜನಪ್ರಿಯತೆಯಿಂದ. ಅದೀಗ ಪಾರ್ಟಿ ವೇರ್, ಪ್ರೊಫೆಷನಲ್ ಅಟೈರ್, ಗಾಂಭೀರ್ಯದ ಸಂಕೇತ ಎಲ್ಲವೂ ಆಗಿ ಉಳಿದುಕೊಂಡಿದೆ. ದೇಹ ಕಟೆದ ಯುವಕರು ಅದರ ಆಕಾರವನ್ನು ಪ್ರಕಟಪಡಿಸುವ ಮಾರ್ಗವಾಗಿಯೂ ಇದನ್ನು ಒಪ್ಪಿಕೊಂಡಿದ್ದಾರೆ. ಸಸ್ಪೆಂಡರ್‌ಗಳು ಅವರ ವಕ್ಷಸ್ಥಳವನ್ನು ಅಪ್ಪಿಕೊಂಡಿವೆ.

■